ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE : 3/2/2021

### ಅಸಮಾಧಾನಿತರ ವಿಶ್ವಾಸ ಗಳಿಸುವ ಉದ್ದೇಶ ವಿಫಲ । ಸಚಿವ ಸ್ಥಾನ, ಅನುದಾನ ಹಂಚಿಕೆ, ಭಿನ್ನಾಭಿಪ್ರಾಯಗಳ ಚರ್ಚೆ

# ಸಿಎಂ ಔತಣಕೂಟಕ್ಕೆ ಬಾರದ ಕೆಲವು ಶಾಸಕರು

3/2/21

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಬಿಜೆಪಿಯಲ್ಲಿ ಅಸಮಾಧಾನ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಮುಖ್ಯಮಂತ್ರಿ ಯಡಿಯೂರಪ್ಪ ಅವರು ಸ್ವಪಕ್ಷದ ಶಾಸಕರ ಡಿನ್ನರ್ ಮೀಟಿಂಗ್‌ನ್ನು ಮಂಗಳವಾರ ಆಯೋಜಿಸಿದ್ದರು.

ಬಿಜೆಪಿ ಆಂತರಿಕ ಭಿನ್ನಾಭಿಪ್ರಾಯವನ್ನು ಕಡಿಮೆ ಮಾಡುವ ಹಾಗೂ ಶಾಸಕರನ್ನು ವಿಶ್ವಾಸಕ್ಕೆ ತಗೆದುಕೊಳ್ಳುವ ಕಾರಣಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಈ ಔತಣಕೂಟವನ್ನು ಆಯೋಜಿಸಿದ್ದರು. ಔತಣಕೂಟಕ್ಕೆ ಹಾಜರಾಗುವಂತೆ ಎಲ್ಲ ಬಿಜೆಪಿಯ ಶಾಸಕರು, ಪರಿಷತ್ ಸದಸ್ಯರು, ಸಚಿವರು ಹಾಗೂ ಉಪಮುಖ್ಯಮಂತ್ರಿಗಳಿಗೆ ಆಹ್ವಾನ ನೀಡಲಾಗಿತ್ತು. ಆದರೆ ಕೆಲವರು ತಮ್ಮ ಅಸಮಾಧಾನವನ್ನು ಈ ಔತಣಕೂಟಕ್ಕೆ ಗೈರಾಗುವ ಮೂಲಕ ಯಡಿಯೂರಪ್ಪ ಅವರಿಗೆ ಇರಿಸುಮುರಿಸು ಉಂಟು ಮಾಡಿದರು.

ಔತಣಕೂಟದಲ್ಲಿ ಪ್ರಮುಖವಾಗಿ ಶಾಸಕರಲ್ಲಿ ಉದ್ಭವಿಸಿರುವ ಭಿನ್ನಾಭಿಪ್ರಾಯ, ಅನುದಾನ ವಿಷಯದಲ್ಲಿರುವ ಗೊಂದಲ ಹಾಗೂ ಸಂಪುಟ ವಿಸ್ತರಣೆ ಹಾಗೂ ಖಾತೆ ಹಂಚಿಕೆಯಿಂದ ಆಗಿರುವ ಸಮಸ್ಯೆಗಳನ್ನು ಚರ್ಚಿಸಲಾಯಿತು. ಇದರೊಂದಿಗೆ ಮುಂದಿನ ತಿಂಗಳು ಬರಲಿರುವ ಬಜೆಟ್ ಬಗ್ಗೆಯೂ ಸಭೆಯಲ್ಲಿ ಚರ್ಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

**ಸರಿಸಮ ಅನುದಾನ:** ಅನುದಾನ ವಿಷಯಕ್ಕೆ ಸಂಬಂಧಿಸಿದಂತೆ ಮುನಿಸಿಕೊಂಡಿರುವ ಶಾಸಕರೊಂದಿಗೆ ಚರ್ಚೆ ನಡೆಸಿರುವ ಯಡಿಯೂರಪ್ಪ ಅವರು, ಕರೋನಾ ಅಪ್ಪಳಿಸಿದ್ದರಿಂದ, ಸಮಾನವಾಗಿ ಹಂಚಿಕೆ ಮಾಡಲು ಸಾಧ್ಯವಾಗಲಿಲ್ಲ, ಆದರೀಗ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿದ್ದು, ಮುಂದಿನ ದಿನದಲ್ಲಿ ಎಲ್ಲರಿಗೂ ಸರಿಸಮನಾಗಿ ಅನುದಾನ ಹಂಚಿಕೆ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಇನ್ನು ಸಚಿವ ಸ್ಥಾನ ವಂಚಿತ ಶಾಸಕರೊಂದಿಗೂ ಪ್ರತ್ಯೇಕ ಸಭೆ ನಡೆಸಿರುವ ಸಿಎಂ, ಅಸಮಾಧಾನಿತ ಶಾಸಕರಿಗೆ ಭವಿಷ್ಯದಲ್ಲಿ ಸೂಕ್ತ ಸ್ಥಾನಮಾನ ನೀಡುವ ಭರವಸೆ ನೀಡಿದ್ದಾರೆ ಎಂದು ತಿಳಿದುಬಂದಿದೆ.



## ಸಭಾಪತಿ ಚುನಾವಣೆ ಬಗ್ಗೆ ಚರ್ಚೆ

**ವಿಧಾನಪರಿಷತ್ ಸಭಾಪತಿ ಆಯ್ಕೆ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಮಂಗಳವಾರ ಸಂಜೆ ಕರೆದಿದ್ದ ತುರ್ತು ಸಚಿವ ಸಂಪುಟ ಸಭೆಯನ್ನು ರದ್ದುಪಡಿಸಿ, ರಾತ್ರಿ ಔತಣಕೂಟದಲ್ಲಿಯೇ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಸಭಾಪತಿ ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ವಿಷಯವಾಗಿಯೂ ಚರ್ಚಿಸಿದ್ದಾರೆ ಎಂದು ತಿಳಿದುಬಂದಿದೆ.**

## 60ರಿಂದ 70 ಶಾಸಕರು ಹಾಜರಿ

**ನಿರೀಕ್ಷೆಯಂತೆ ಮುಖ್ಯಮಂತ್ರಿಗಳ ಡಿನ್ನರ್ ಪಾರ್ಟಿಗೆ ಸುಮಾರು 40ರಿಂದ 45 ಶಾಸಕರು ಗೈರಾಗಿದ್ದಾರೆ. ಕೆಲವರು ಮೊದಲೇ ಅನುಮತಿ ಪಡೆದು ಸಭೆಯಿಂದ ದೂರ ಉಳಿದಿದ್ದರೆ; ಇನ್ನು ಕೆಲವರು ತಮ್ಮ ಅಸಮಾಧಾನವನ್ನು ಈ ಮೂಲಕ ಹೊರ ಹಾಕಿದ್ದಾರೆ. ವಿಧಾನಸಭೆಯ ಮುಖ್ಯ ಸಚೇತಕ ಸುನೀಲ್‌ಕುಮಾರ್ ಅವರು ಕೇರಳ ಪ್ರವಾಸದಲ್ಲಿರುವುದರಿಂದ ಸಭೆಗೆ ಗೈರಾಗಿದ್ದರು. ಈ ಬಗ್ಗೆ ಮೊದಲೇ ಮಾಹಿತಿ ನೀಡಿದ್ದರು ಎನ್ನಲಾಗಿದೆ.**

## ಹಾಜರಾಗದ ಪ್ರಮುಖರು

● ಬಸನಗೌಡ ಪಾಟೀಲ್ ಯತ್ನಾಳ್ ● ರಾಮದಾಸ್ ● ಅರವಿಂದ ಬೆಲ್ಲದ್ ● ಕರುಣಾಕರ ರೆಡ್ಡಿ ● ತಿಪ್ಪಾರೆಡ್ಡಿ ● ಅಪ್ಪಚ್ಚು ರಂಜನ್ ● ಸತೀಶ್ ರೆಡ್ಡಿ ● ಅಭಯ ಪಾಟೀಲ ● ಅನಿಲ್ ಬೆನಕೆ ● ದೊಡ್ಡನಗೌಡ ನರಿಬೋಳ ● ಚರಂತಿಮಠ ● ಸೋಮಶೇಖರ್ ರೆಡ್ಡಿ ● ಗೂಳಿಹಟ್ಟಿ ಶೇಖರ್ ● ದಿನಕರ್ ಶೆಟ್ಟಿ ● ಪೂರ್ಣಿಮಾ ಶ್ರೀನಿವಾಸ್